


ನಾಗರಾಜ ವಸ್ತಾರೆ

# ಸೀತಾನದಿಯ ಸೇತುವೆ

'ಒಔರಾಗ್... ಇನ್ನೊಂದು ಹೇಳೋಕೆ ಮರೆತಿದ್ದೆ... ಐ ಥಿಂಕ್, ನೈನ್ಟೀನ್ ನೈಂಟಿಫೈವ್‌ನಲ್ಲಿ ಒಂದು ಹಾಲಿವುಡ್ ಸಿನೆಮಾ ಬಂದಿತ್ತು... ಬ್ರಿಡ್ಜಸ್ ಆಫ್ ದಿ ಮ್ಯಾಡಿಸನ್‌ಕೌಂಟಿ ಅಂತ. ಕ್ಲಿಂಟ್ ಈಸ್ಟುಡ್ ಲೀಡ್‌ರೋಲ್ ಮಾಡಿದ್ದ. ಹೀರೊಯಿನ್ ಯಾರೂಂತ ನೆನಪಾಗುತಿಲ್ಲ; ಮೋಸ್ಟ್ಲೀ ಕ್ಯಾಥೆಲೀನ್ ಕೆನೆಡಿ ಅನಿಸುತ್ತೆ... ಬ್ಯೂಟಿಫುಲ್ ಸಿನೆಮಾ. ಇಟ್ ವಾಸ್ ಆಲಬೌಟ್ ದಿ ಬ್ರಿಡ್ಜಸ್... ಇಡೀ ಸಿನೆಮಾ ಸೇತುವೆಗಳ ಬಗ್ಗೆ. ಶುರುವಾಗೋದೂ ಸೇತುವೆಯಿಂದಲೇ... ಮುಗಿಯೋದೂ ಸೇತುವೆಯಲ್ಲೇ... ಸೊಗಸಾದ ನೆರೇಶನ್ನು... ನಿನಗೆ ಅದರ ಕತೆ ಹೇಳಲೇಬೇಕು. ಒಬ್ಬ ಲೇಖಕನಾಗಿರೋದರಿಂದ ನೀನಿನ್ನೂ ಚೆನ್ನಾಗಿ ಇದನ್ನು ಅರ್ಥೈಸಿಕೊಳ್ಳಬಲ್ಲೆ...' ವಿಷಯಾಂತರವಾದರೂ ಸರಿಯೆ, ಹೇಳಿಯೇ ತೀರುವುದೆಂದುಕೊಂಡು, ಫೋನಿನಲ್ಲಿಯೇ ಕತೆ ಹೇಳತೊಡಗಿದೆ.